# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 110/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ನವೀನ್ ಕುಮಾರ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಗಿರಿಯಪ್ಪ | | **28.07.2025** |
| **ವಯಸ್ಸು** | ಃ **40** ವರ್ಷ | | |
| **ವೃತ್ತಿ** | ಃ ಕಲೆಕ್ಷನ್ ಮ್ಯಾನೇಜರ್, ಫೈನಾನ್ಸ್ ಕಂಪನಿ | **ಪ್ರಾ.ಸಾ.** ಃ | 34 |
| **ವಾಸಸ್ಥಳ** | ಃ ಹಿನಕಲ್, ಮೈಸೂರು | **ಚಾ.ಸಾ.** ಃ | **55** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು *2014* ರಿಂದ *2017* ನೇ ಇಸವಿಯವರೆಗೆ ಮ್ಯಾಗ್ಮ ಫೈನಾನ್ಸ್ ಕಂಪನಿಯಲ್ಲಿ ಬ್ರಾಂಚ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿದ್ದೆನು. ಆ ವೇಳೆಯಲ್ಲಿ ನನ್ನ ಕಡೆ ಇದ್ದಂತಹ ಮೊಬೈಲ್ ಸಿಮ್ ನಂಬರ್ ಈಗ ಜ್ಞಾಪಕದಲ್ಲಿ ಇರಲಿಲ್ಲ. ನಾನು *2017* ನೇ ಇಸವಿಯಲ್ಲಿ ಬಳಸುತ್ತಿದ್ದ ಸಿಮ್ ಯಾರ ಹೆಸರಿನಲ್ಲಿ ಇತ್ತು ಎಂದು ಹೇಳಲು ಆಗುವುದಿಲ್ಲ. ನನಗೆ ವಿ.ಸಿ ಮುಖಾಂತರ ಹಾಜರುಪಡಿಸಿರುವ ಆರೋಪಿತನ ಪರಿಚಯ ಇರುವುದಿಲ್ಲ. ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ನಾನು ಈಗ ವಿ.ಸಿ ಮುಖಾಂತರ ಹಾಜರುಪಡಿಸಿರುವ *10* ನೇ ಆರೋಪಿತನಿಗೂ ಮತ್ತು ನನ್ನ ಅಣ್ಣ ಅಶೋಕನಿಗೂ ಪರಿಚಯ ಇತ್ತೋ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮತ್ತು *10* ನೇ ಆರೋಪಿತನ ನಡುವೆ ಯಾವುದೇ ಫೋನ್ ಸಂಪರ್ಕ

ಇರಲಿಲ್ಲ ಮತ್ತು ನಮ್ಮಿಬ್ಬರ ನಡುವೆ ಯಾವುದೇ ವ್ಯವಹಾರ ಇರಲಿಲ್ಲ. ನಾನು ಈ ಪ್ರಕರಣದ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರಲಿಲ್ಲ.

ನಾನು ನ್ಯಾಯಾಧೀಶರ ಸಮಕ್ಷಮದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಈಗ ನೋಡುತ್ತಿರುವ ದಂಡ ಪ್ರಕ್ರಿಯೆ ಸಂಹಿತೆ ಕಲಂ *164* ರ ಹೇಳಿಕೆ ಮೇಲಿರುವ ಸಹಿ ನನ್ನ ಸಹಿ ಇರುವುದಿಲ್ಲ.

*( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಸಮಯ ಕೋರಿದ್ದು, ಸಮಯವನ್ನು ನೀಡಲಾಯಿತು.)*

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***